VIJAYAKUMAR KANNUR
Digitally signed by VIJAYAKUMAR KANNUR
Date: 2026.01.23 16:38:24 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 23.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ದೂರುದಾರ ಪರ ಶ್ರೀ ವಾಯ್ ಎಂ ಹೆಚ್ ವಕೀಲರಿಂದ :</u>**

ನಾನು SSLC ಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ಈ ದೂರಿನಲ್ಲಿ ಕಾಣಿಸಿರುವ ಶಿರೋನಾಮೆಯ ವಿಳಾಸದಲ್ಲೇ ನಾನು ಖಾಯಂ ಆಗಿ ವಾಸವಾಗಿರುತ್ತೇನೆ ಎಂದರೆ ಸರಿ. ನಿಪಿ 1 ರ ಚೆಕ್ ಮೇಲಿನ ಬ್ಯಾಂಕ ಖಾತೆ ನನ್ನದೇ ಆಗಿರುವುದು ಎಂದರೆ ಸರಿ. ನಿಪಿ 1 ರ ಚೆಕ್ ನನ್ನ ಬ್ಯಾಂಕ ಖಾತೆಯದಾಗಿರುವುದು ಎಂದರೆ ಸರಿ. ನಿಪಿ 1(ಎ) ಸಹಿ ನನ್ನದೇ ಆಗಿರುವುದು. ಆದರೆ ಅದರ ಮೇಲಿನ ಬರಹ ನನ್ನದಾಗಿರುವುದಿಲ್ಲ.

2. ನಾನು ಮತ್ತು ದೂರುದಾರ ಸಮಾಜ ಸೇವಕರಾಗಿದ್ದು, ನಾವಿಬ್ಬರು ಈ ಸಮಾಜ ಸೇವೆಯ ಕೆಲಸದ ನಿಮಿತ್ತ ಮೇಲಿಂದ ಮೇಲೆ ಬೆಂಗಳೂರಿಗೆ ಹೋಗಿ ಬಂದು ಮಾಡುತ್ತಿದ್ದೇ ವು ಎಂದರೆ ಸರಿಯಲ್ಲ. ದೂರುದಾರ ಯಾರು ಎಂದು ಸಹ ನನಗೆ ಮಾಹಿತಿ ಇರುವುದಿಲ್ಲ. ನನಗೆ ಹಣಕಾಸಿನ ಅಡಚಣೆ ಇರುವುದಾಗಿ ಎಂದು ಹೇಳಿದಾಗ ದೂರುದಾರ ದಿಃ 15.05.2024 ರಂದು ರೂ. 10 ಲಕ್ಷ ಹಣವನ್ನು ನನಗೆ ಕೈಗಡ ರೂಪದಲ್ಲಿ ಸಾಲವಾಗಿ ನೀಡಿರುವನು ಎಂದರೆ ಸರಿಯಲ್ಲ. ಈ ಕೈಗಡ ಸಾಲ ಮರಳಿ ನೀಡುವಂತೆ ದೂರುದಾರ ನನಗೆ 2024 ರ ಅಕ್ಟೋಬರ ತಿಂಗಳಲ್ಲಿ ನಾನು ವಿಚಾರಿಸಿದಾಗ ನಾನು ನಿಪಿ 1 ರ ಚೆಕ್ ನ್ನು ದಿಃ 30.09.2024 ಅಂತ ಮುಂದಿನ ದಿನಾಂಕ ನಮೂದು ಮಾಡಿ ಈ ಚೆಕ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಗಧೀಕರಣಕ್ಕಾಗಿ ದಿಃ 24.10.2024 ರಂದು ದೂರುದಾರ State Bank of India, Hadagali ಶಾಖೆಗೆ ನೀಡಿದ್ದರು ಎಂದರೆ ಇದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ದಿಃ 25.10.2024 ರಂದು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಹೇಳಿ ಆ ಬ್ಯಾಂಕಿನವರು ನಗಧೀಕರಣಗೊಳಿಸದೇ ಆ ಚೆಕ್ ನ್ನು ಮರಳಿ

ನಿಡೀರುವರು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ದಿಃ 11.11.2024 ರಂದು ದೂರುದಾರ ತಮ್ಮ ವಕೀಲರ ಮೂಲಕ ಕಾನೂನು ಬದ್ದವಾದ ತಿಳುವಳಿಕೆ ನೋಟಿಸು ನೀಡಿರುವರು ಎಂದರೆ ಸದರಿ ನೋಟಿಸಿಗೆ ತಾನು ಉತ್ತರ ನೀಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು.

3. ನನ್ನ ಉತ್ತರದ ನೋಟಿಸಿನಲ್ಲಿ ಬರೆದ ಸಂಗತಿಗಳು ನಿಜವಿರುವವು. ಈ ಉತ್ತರದ ನೋಟಿಸಿನಲ್ಲಿ ನಾನು ಮತ್ತು ಯಮನಪ್ಪ ನಾಗಪ್ಪ ನಾಗಬೋಳಿಕೋಡ, ಸಾಕೀನ ಮೇಳ್ಳಿಗೇರಿ ಕೂಡಿಕೊಂಡು ಬೆಂಗಳೂರಿಗೆ ಹೋದಾಗ ಇತ ಬೆಂಗಳೂರಿನಲ್ಲಿ ನನ್ನ ಬ್ಯಾಗಿನಲ್ಲಿ ಇದ್ದ ಎರಡು ಚೆಕ್ ಗಳನ್ನು ಕಳ್ಳತನ ಮಾಡಿರುವನು ಎಂದು ಬರೆಸಿರುವ ಸಂಗತಿ ನಿಜವಿರುವುದು. ಈ ಚೆಕ್ ಕಳ್ಳತನ ಮಾಡಿದ ಬಗ್ಗೆ ಯಮನಪ್ಪನ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ಈ ಸಂಗತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಇತನ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಆದರೆ ಆತನನ್ನು ಫೋನ್ ನಲ್ಲಿ ವಿಚಾರಿಸಿದಾಗ ಆತ ಬಗೆಹರಿಸಿಕೊಳ್ಳುವುದಾಗಿ ಎಂದು ಹೇಳಿರುವನು. ಈ ಸಂಗತಿ ನನ್ನ ಸಾಕ್ಷ್ಯದಲ್ಲಿ ಹೇಳಿರುವುದಿಲ್ಲ. ದೂರುದಾರನ ಕಡೆಯಿಂದ ಪಡೆದುಕೊಂಡಿರುವ ಹಣವನ್ನು ಎತ್ತಿಹಾಕಬೇಕೆಂಬ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ದೂರುದಾರನ ಮಧ್ಯೆ ಹಣಕಾಸಿನ ವ್ಯವಹಾರ ಆಗಿರುವುದರಿಂದಲೇ ಆ ಕಾರಣಕ್ಕೆ ನಾನು ಆತನ ವಿರುದ್ದ ದೂರು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರನ ಕಡೆಯಿಂದ ಪಡೆದುಕೊಂಡಿರುವ ಹಣವನ್ನು ಮುಳುಗಿಸಬೇಕು ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ